# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ವೈ2(ಇ.ಪ)ಕಾ.ಟೋ/05/2018–19 ದಿನಾಂಕ: 23.07.2018

## ದರಪಟ್ಟಿ ಆಹ್ವಾನ ಪತ್ರ

**ವಿಷಯ:** ಇತರೆ ಪರೀಕ್ಷೆಗಳ ವಿಭಾಗದ ಜೆರಾಕ್ಸ್ ಯಂತ್ರ ಮತ್ತು ಪ್ರಿಂಟರ್‌ಗಳಿಗೆ ಟೋನರ್/ಕಾಟ್ರೇಜ್ ಹಾಗೂ ರೇಸೋಗ್ರಾಫ್ ಯಂತ್ರಕ್ಕೆ ಇಂಕ್ ಮತ್ತು ಮಾಸ್ಟರ್ ಖರೀದಿಗಾಗಿ ದರಪಟ್ಟಿ ಆಹ್ವಾನಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದ ಜೆರಾಕ್ ಯಂತ್ರಗಳಿಗೆ ಮತ್ತು ಪ್ರಿಂಟರ್‌ಗಳಿಗೆ ಟೋನರ್/ಕಾಟ್ರೇಜ್ ಹಾಗೂ ರೇಸೋಗ್ರಾಫ್ ಯಂತ್ರಕ್ಕೆ ಇಂಕ್ ಮತ್ತು ಮಾಸ್ಟರ್ ಖರೀದಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಂತ್ರಗಳಿಗೆ ಎಲ್ಲಾ ತೆರಿಗೆ ಸೇರಿ (ಒಂದಕ್ಕೆ) ತಗಲುವ ವೆಚ್ಚವನ್ನು ದಿನಾಂಕ:04.08.2018ರೊಳಗೆ ಮಂಡಳಿಗೆ ಮುಚ್ಚಿದ ಲಕೋಟೆಯಲ್ಲಿ ನಿರ್ದೇಶಕರು(ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಅಂಚೆ/ಮುದ್ದಾಂ ಮೂಲಕ ದರಪಟ್ಟಿಯನ್ನು ಸಲ್ಲಿಸಲು ತಿಳಿಸಿದೆ.

1. ಜೆರಾಕ್ಸ್ ಯಂತ್ರ ಟೋನರ್ : T-4530 D
2. ಎಂ.ಎಫ್.ಡಿ ಪ್ರಿಂಟರ್ : T-1810 D
3. ಪ್ರಿಂಟರ್ ಟೋನರ್ : ತೋಷಿಬಾ 2507 P
4. ರೇಸೋಗ್ರಾಫ್ ಯಂತ್ರಕ್ಕೆ : ಡೂಪ್‌ಲೋ ಇಂಕ್ ಮತ್ತು ಮಾಸ್ಟರ್

**ಷರತ್ತುಗಳು:–**

1. ಜೆರಾಕ್ ಯಂತ್ರಗಳಿಗೆ ಮತ್ತು ಪ್ರಿಂಟರ್‌ಗಳಿಗೆ ಟೋನರ್/ಕಾಟ್ರೇಜ್ ಹಾಗೂ ರೇಸೋಗ್ರಾಫ್ ಯಂತ್ರಕ್ಕೆ ಇಂಕ್ ಮತ್ತು ಮಾಸ್ಟರ್ ಖರೀದಿಗೆ ಸಂಬಂಧಿಸಿದಂತೆ ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು. ಮತ್ತು ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು.
2. ಸರಬರಾಜು ಮಾಡುವ ಸಾಮಗ್ರಿಗಳು ಅಧಿಕೃತ ಸಂಸ್ಥೆಯಿಂದ ಉತ್ತಮ ಗುಣಮಟ್ಟ ಹೊಂದಿರಬೇಕು.
3. ಕಳಪೆ ಗುಣಮಟ್ಟದ ಹಾಗೂ ರೀಫಿಲ್ಲಿಂಗ್ ಮಾಡಿರುವ ಕಾಟ್ರೇಡ್ಜ್‌ಗಳನ್ನು ಸರಬರಾಜು ಮಾಡಿದ್ದಲ್ಲಿ ಅಂತಹ ಕಾಟ್ರೇಡ್ಜ್‌ಗಳನ್ನು ಮಂಡಳಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೆ ಮಂಡಳಿ ಇದಕ್ಕೆ ಯಾವುದೇ ಬಿಲ್ಲಿನ ಮೊತ್ತ ಪಾವತಿಸುವುದಿಲ್ಲ.
4. ಸದರಿ ಕಾರ್ಯಕ್ಕೆ ಮಂಡಳಿಯಿಂದ ಯಾವುದೇ ಮುಂಗಡ ಹಾಗೂ ಸಾರಿಗೆ ವೆಚ್ಚ ನೀಡಲಾಗುವುದಿಲ್ಲ.
5. ಖರೀದಿಗೆ ಸಂಬಂಧಿಸಿದಂತೆ ವೆಚ್ಚದ ಬಿಲ್ಲಿನ ಮೊತ್ತದಲ್ಲಿ ಅನ್ವಯಿಸುವ ತೆರಿಗೆಗಳನ್ನು ಕಟಾಯಿಸಿ ನಿಯಮಾನುಸಾರ ಚೆಕ್ ಮೂಲಕ ಪಾವತಿಸಲಾಗುವುದು.
6. ಅತಿ ಕಡಿಮೆ ದರ ಸೂಚಿಸಿ ಆಯ್ಕೆಯಾಗುವ ಸಂಸ್ಥೆಯು ಕನ್ಸ್ಯೂಮಬಲ್ ಸರಬರಾಜಿಗೆ ನೀಡಲಾಗುವ ಕಾರ್ಯಾದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು. ವಿಳಂಬವಾದಲ್ಲಿ ವಿಳಂಬದ ಅವಧಿಗೆ ದಿನವೊಂದಕ್ಕೆ 500–00ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.
7. ಲಕೋಟೆ ಮೇಲೆ ಕಡ್ಡಾಯವಾಗಿ ಕಾಟ್ರೇಡ್ಜ್ ಮತ್ತು ಟೋನರ್‌ಗಳಿಗೆ ಸಂಬಂಧಿಸಿದ ದರಪಟ್ಟಿ ಎಂದು ನಮೂದಿಸುವುದು.

ಕರಡು ನಿರ್ದೇಶಕರು (ಇತರೆ ಪರೀಕ್ಷೆಗಳು)ರವರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರ ಪರವಾಗಿ
(ಇತರೆ ಪರೀಕ್ಷೆಗಳು)

**ಪ್ರತಿಗಳು:–**

1) ಮಂಡಳಿಯ ಸೂಚನಾ ಫಲಕಕ್ಕೆ
2) ಕಛೇರಿ ಪ್ರತಿ.

D:\KSEEB (OTHER EXAMS)\ADMN (OE)\Y2 SECTION\Y SECTION\printre,toner supply .docx